ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆB+ ಗ್ರೇಡ್– 2021)PM-USHA (MERU)

**RANI CHANNAMMA UNIVERSITY**
Vidyasangama, National Highway - 04, Bhootaramanahatti, Belagavi - 591156
(NAAC Accredited with B+ Grade – 2021) PM-USHA (MERU)
E-mail: registrar@rcub.ac.in
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565234

ಸಂ:ರಾಚವಿ/ಬೆಳಗಾವಿ/ವಿದ್ಯಾಮಂಡಳ/ಕುಸಕಾ/118178/2025-26/ 3911 ದಿನಾಂಕ: 11 OCT 2025

## ಸುತ್ತೋಲೆ

**ವಿಷಯ:** 2025-26 ನೇ ಶೈಕ್ಷಣಿಕ ಸಾಲಿನ ಸ್ನಾತಕ ಎರಡು ವರ್ಷದ ಬಿ.ಇಡಿ (B.Ed) ಕೋರ್ಸಿಗಾಗಿ ಆಡಳಿತ ಮಂಡಳಿ ಪ್ರವೇಶ ಪ್ರಕ್ರಿಯೆಯನ್ನು UUCMS ತಂತ್ರಾಂಶದ ಮೂಲಕ ಪ್ರಾರಂಭಿಸುವ ಕುರಿತು.

**ಉಲ್ಲೇಖ:** 1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಪ್ರವೇಶಾತಿ ಅಧಿಸೂಚನೆ ಸಂಖ್ಯೆ: ಸಿಎಸಿ-05/ಬಿ,ಇಡಿ/ದಾಖಲಾತಿ-03/2025-26, ದಿನಾಂಕ:03-10-2025.
2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 10-10-2025.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳನ್ವಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಯಲ್ಲಿ ಇರುವ ಎಲ್ಲ ಸಂಯೋಜಿತ ಬಿ.ಇಡಿ (B.Ed) ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 2025-26 ನೇ ಸಾಲಿನ ಸ್ನಾತಕ ಬಿ.ಇಡಿ (B.Ed) ಕೋರ್ಸಿನ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ (Management Quota) ಕೋಟಾದಲ್ಲಿ ವಿಶ್ವವಿದ್ಯಾಲಯದ ಹಾಗೂ ಸಿ.ಎಸ್.ಸಿ ನಿಯಮಾವಳಿಗಳನ್ವಯ ಸೀಟು ಹಂಚಿಕೆ ಪ್ರವೇಶಾತಿ ಪ್ರಕ್ರಿಯೆಯನ್ನು ದಿನಾಂಕ:14-11-2025 (ಶುಕ್ರವಾರ) ದಿಂದ ಈ ಕೆಳಗಿನ ನಿಬಂಧನೆಗಳು ಹಾಗೂ ಈ ಕೆಳಗಿನ ದಿನಾಂಕಗಳಂತೆ UUCMS ನ ತಂತ್ರಾಂಶದ ಮೂಲಕ ಬಿ.ಇಡಿ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದುಕೊಳ್ಳಲು ಈ ಮೂಲಕ ತಿಳಿಸಲಾಗಿದೆ.

### 2025-26 ನೇ ಶೈಕ್ಷಣಿಕ ಸಾಲಿನ ಬಿ.ಇಡಿ ಕೋರ್ಸಗೆ ಪ್ರವೇಶಾತಿ ವಿವರ

| ಅ.ಸಂ | ಬಿ.ಇಡಿ ಪ್ರಥಮ ಸೆಮಿಸ್ಟರ್ ಪ್ರವೇಶ ಪ್ರಕ್ರಿಯೆಯ ವಿವರ | ಪ್ರವೇಶಾತಿ ಅವಧಿ |
|---|---|---|
| 01 | UUCMS ತಂತ್ರಾಶದ ಮೂಲಕ (ಆನ್-ಲೈನ್) ದಂಡ ರಹಿತವಾಗಿ ಪ್ರವೇಶ ಪಡೆಯುವ ದಿನಾಂಕ | 14-11-2025 ರಿಂದ 15-12-2025 ರ ವರೆಗೆ |
| 02 | ರೂ.2,000/- ದಂಡ ಶುಲ್ಕದೊಂದಿಗೆ ಪ್ರವೇಶ ಪಡೆಯುವ ದಿನಾಂಕ | 16-12-2025 ರಿಂದ 31-12-2025 ರ ವರೆಗೆ |
| 03 | ಅರ್ಹತಾ ಪ್ರಮಾಣ ಪತ್ರ ವಿತರಿಸುವ ದಿನಾಂಕ | 14-11-2025 ರಿಂದ 31-12-2025 ರ ವರೆಗೆ |

## ಪ್ರವೇಶಾತಿಯಲ್ಲಿ ಅನುಸರಿಸಬೇಕಾದ ಅಂಶಗಳು

1. ಎಲ್ಲ ಶಿಕ್ಷಣ ಮಹಾವಿದ್ಯಾಲಯದವರು ತಮ್ಮ ಮಹಾವಿದ್ಯಾಲಯದ UUCMS ತಂತ್ರಾಂಶದ Admin Login ದಲ್ಲಿ 2025-26 ನೇ ಸಾಲಿಗೆ Setup Seat Allocation Method ಹಾಗೂ ಮಹಾವಿದ್ಯಾಲಯದ Fees Details ಅಳವಡಿಸುವುದು ಕಡ್ಡಾಯವಾಗಿರುತ್ತದೆ.
2. **ದಿನಾಂಕ:14-11-2024 (ಶುಕ್ರವಾರ)** ದಿಂದ ಪ್ರವೇಶ ಬಯಸುವ ವಿದ್ಯಾರ್ಥಿಗಳು UUCMS ತಂತ್ರಾಂಶದ ಮೂಲಕ ಬಿ.ಇಡಿ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶವನ್ನು ಪಡೆದುಕೊಳ್ಳಬಹುದಾಗಿದೆ.
3. ಪ್ರವೇಶಾತಿಯನ್ನು ಮೆರಿಟ ಕಮ್-ರೋಸ್ಟರ ಅನುಗುಣವಾಗಿ ನಡೆಸಬೇಕು.
4. 2025-26 ನೇ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಮತ್ತು ಶೈಕ್ಷಣಿಕ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ವಿಶ್ವವಿದ್ಯಾಲಯ ನಿಗದಿಪಡಿಸಿದ ಶೈಕ್ಷಣಿಕ ವೇಳಾಪಟ್ಟಿಯಂತೆ ನಡೆಸತಕ್ಕದ್ದು.
5. ಕಾಲಕಾಲಕ್ಕೆ ಹೊರಡಿಸಿರುವ NCTE/ನ್ಯಾಯಾಲಯದ ಆದೇಶಗಳು/ಉನ್ನತ ಶಿಕ್ಷಣ ಇಲಾಖೆ/ಮತ್ತು ವಿಶ್ವವಿದ್ಯಾಲಯದ ಆದೇಶಗಳನ್ನು ಪಾಲಿಸತಕ್ಕದ್ದು.
6. ವಿದ್ಯಾರ್ಥಿಗಳು ಲಿಖಿತವಾಗಿ ಆಯ್ಕೆ ಮಾಡಿಕೊಂಡ ಬೋಧನಾ ವಿಷಯಗಳ ತರಗತಿಗಳಿಗೆ ಮಾತ್ರ ಹಾಜರು ಪಡಿಸಿಕೊಳ್ಳುವುದು.
7. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವೈಬ್‌ಸೈಟನಲ್ಲಿ ಅಳವಡಿಸಿದ ಸ್ನಾತಕ B.Ed ಕೋರ್ಸಗಳ ಪಠ್ಯಕ್ರಮಗಳನ್ನೇ ಕಡ್ಡಾಯವಾಗಿ ತರಗತಿಗಳಲ್ಲಿ ಬೋಧಿಸುವುದು.
8. ಪ್ರತಿ ವಿದ್ಯಾರ್ಥಿಯ ಹಾಜರಾತಿಯು ಶೇಕಡಾ 85% ಪೂರೈಸುವುದು ಕಡ್ಡಾಯವಾಗಿರುತ್ತದೆ ಹಾಗೂ ಇದರ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸುವುದು ಹಾಗೂ ಹಾಜರಾತಿ ಕೊರತೆ ಉಂಟಾದಲ್ಲಿ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ನಿಯಮಾವಳಿ ಪ್ರಕಾರ ಅವಕಾಶ ನೀಡಬಾರದು.
9. ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮತ್ತು ಇತರೆ ಮಾಹಿತಿಗಳನ್ನು www.rcub.ac.in ಜಾಲತಾಣದಿಂದ ಪಡೆದು ಅಳವಡಿಸಿಕೊಳ್ಳುವುದು.
10. ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಕಟಣೆ ಸಂಖ್ಯೆ:ಸಿಎಸ್ ಸಿ-05/ಬಿ.ಇಡಿ/ದಾಖಲಾತಿ-03/2025-26 ದಿನಾಂಕ:03-10-2025 ರನ್ವಯ ಪ್ರವೇಶಾತಿ ನಿಯಮವನ್ನು ಆಡಳಿತ ಮಂಡಳಿಯ ಮೀಸಲಾತಿ ಸೀಟುಗಳಿಗೂ ಕೂಡಾ (Management Quota) ಪಾಲಿಸುವುದು.
11. ಸರಕಾರದಿಂದ ಅನುಮತಿ ಪಡೆದುಕೊಂಡು ಬರುವ ಶಾಲಾ ಶಿಕ್ಷಕರ ಯಾದಿ ಸಿದ್ದಮಾಡಿಕೊಂಡು ಪ್ರವೇಶ ಪಡೆಯುವ ಪೂರ್ವದಲ್ಲಿ ವಿಶ್ವವಿದ್ಯಾಲಯದಿಂದ ಅನುಮತಿ ಪಡೆದುಕೊಳ್ಳಬೇಕು.
12. ನಿಗದಿಪಡಿಸಿದ ಪ್ರವೇಶ ಮಿತಿಯೊಳಗೆ ಪ್ರವೇಶ ಪಡೆಯತಕ್ಕದ್ದು ಪ್ರವೇಶ ಮಿತಿಯನ್ನು ಉಲ್ಲಂಘನೆ ಮಾಡಬಾರದು, ಹಾಗೇನಾದರೂ ಮಾಡಿದ್ದಲ್ಲಿ ವಿಶ್ವವಿದ್ಯಾಲಯ ಯಾವುದೇ ರೀತಿಯಿಂದಲೂ ಜವಾಬ್ದಾರಿಯಾಗಿರುವುದಿಲ್ಲ.
13. ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಮಹಿಳಾ ವಿಶ್ವವಿದ್ಯಾಲಯವನ್ನು ಹೊರತು ಪಡಿಸಿ, UGC ಯಿಂದ ಮಾನ್ಯತೆ ಹೊಂದಿದ ಕರ್ನಾಟಕದ ವಿಶ್ವವಿದ್ಯಾಲಯಗಳು ಹಾಗೂ ಕರ್ನಾಟಕೇತರ ವಿಶ್ವವಿದ್ಯಾಲಯಗಳ (Other University Candidates) ಅಭ್ಯರ್ಥಿಗಳು ಪ್ರವೇಶ ಪ್ರಕ್ರಿಯೆಯ ಮುಂಚೆ ಕಡ್ಡಾಯವಾಗಿ ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗದಿಂದ ಅರ್ಹತಾ ಪ್ರಮಾಣ ಪತ್ರಗಳನ್ನು (Eligibility Certificate) ಪಡೆದುಕೊಂಡು, ಪ್ರವೇಶಗಳನ್ನು ಪಡೆದುಕೊಳ್ಳಬೇಕು.

14. UGC ಯಿಂದ ಮಾನ್ಯತೆ ಹೊಂದಿದ ವಿಶ್ವವಿದ್ಯಾಲಯದ ಪದವಿ/ಸ್ನಾತಕೋತ್ತರ ಪದವಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-I ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಆಂತರಿಕ ಅಂಕಗಳು ಸೇರಿ ಸರಾಸರಿ ಶೇಕಡಾ 45% ಅಂಕಗಳು ಮತ್ತು ಇತರೆ ಅಭ್ಯರ್ಥಿಗಳಿಗೆ ಆಂತರಿಕ ಅಂಕ ಸೇರಿ ಕನಿಷ್ಠ ಶೇಕಡಾ 50% ಅಂಕ ಹೊಂದಿದ ಅಭ್ಯರ್ಥಿಗಳನ್ನು ಮಾತ್ರ ಪ್ರವೇಶಾತಿಗೆ ಪರಿಗಣಿಸತಕ್ಕದ್ದು. ಇಂಜಿನಿಯರಿಂಗ್‌ನಲ್ಲಿ ಪದವಿ ಹೊಂದಿರುವ ಅಭ್ಯರ್ಥಿಗಳು ಕನಿಷ್ಠ ಶೇಕಡಾ 55% ಹೊಂದಿರತಕ್ಕದ್ದು.

| S No | Eligibility Certificate Fee Details | Fee Rs |
|---|---|---|
| 01 | Karnataka Students | 3,025/- |
| 02 | Non Karnataka Students | 6,050/- |
| 03 | Non resident Indians | 12,100/- |
| 04 | Foreign Students | 18,150/- |
| 05 | Without Eligibility Certificate admission penalty to Student | 1,000/- |
| 06 | Without Eligibility Certificate admission penalty to Principal | 12,000/- |

15. ಅರ್ಹತಾ ಪ್ರಮಾಣ ಪತ್ರ ಪಡೆಯುವ ಅಭ್ಯರ್ಥಿಗಳ ಪದವಿ ಅಂಕಪಟ್ಟಿಗಳು ವಿಶ್ವವಿದ್ಯಾಲಯಕ್ಕೆ ಅನುಮಾನಸ್ಪದ ಕಂಡುಬಂದಲ್ಲಿ ವಿಶ್ವವಿದ್ಯಾಲಯವು ಸಂಬಂಧಿಸಿದ ವಿಶ್ವವಿದ್ಯಾಲಯಕ್ಕೆ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ನೈಜತೆ ಪರಿಶೀಲನೆಗೆ ಕಳುಹಿಸಿಕೊಡಲಾಗುವುದು ಹಾಗೂ ಅಂತಹ ಪದವಿ ಅಂಕಪಟ್ಟಿಗಳ ನೈಜತೆ ಪರಿಶೀಲನೆಗೆ ಸಂಬಂಧಿಸಿದ ವಿವಿಧ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ನೈಜತೆ ಪ್ರಮಾಣ ಪತ್ರದ ಶುಲ್ಕಗಳನ್ನು ಸದರಿ ಅಭ್ಯರ್ಥಿಗಳೇ ಭರಿಸಬೇಕು. ಪದವಿ ಅಂಕಪಟ್ಟಿಗಳ ನೈಜತೆ ಕುರಿತು ಪರಿಶೀಲನೆ ಪ್ರಮಾಣ ಪತ್ರ ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ಬಂದ ನಂತರ ಸದರಿ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಒಂದು ವೇಳೆ ಪದವಿ ಅಂಕಪಟ್ಟಿಗಳು ನಕಲು ಅಥವಾ ತಿದ್ದುಪಡಿಯಾಗಿರುವ ಅಥವಾ ಸುಳ್ಳು ಪದವಿ ಅಂಕಪಟ್ಟಿಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಅಭ್ಯರ್ಥಿಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.

16. ಖಾಲಿ ಉಳಿದ ಸರಕಾರದ ಸೀಟುಗಳನ್ನು ಸರಕಾರದ ಪತ್ರ ಮತ್ತು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ ಭರ್ತಿ ಮಾಡಬಾರದು.

17. ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಏಕರೂಪ ಶುಲ್ಕದ ಅಧಿಸೂಚನೆಯಂತೆ ವಿಶ್ವವಿದ್ಯಾಲಯದ ನಿಗದಿತ ಅವಧಿಯಲ್ಲಿ UUCMS ನ ತಂತ್ರಾಂಶದ ಆನ್-ಲೈನ್ ಮೂಲಕ ಪಾವತಿಸಿ ಪ್ರವೇಶವನ್ನು ಪಡೆದುಕೊಳ್ಳುವುದು.

18. UUCMS ತಂತ್ರಾಂಶದಲ್ಲಿ ವಿದ್ಯಾರ್ಥಿಗಳ ಹೆಸರುಗಳನ್ನು Aadhar Card ದಲ್ಲಿ ಇರುವ ಹಾಗೆ ಸರಿಯಾಗಿ ಭರ್ತಿ ಮಾಡತಕ್ಕದ್ದು. ಒಂದು ವೇಳೆ ಹೆಸರುಗಳನ್ನು ತಪ್ಪು ಭರ್ತಿ ಮಾಡಿದ್ದಲ್ಲಿ ಮುಂದಿನ ಎಲ್ಲ ಆಗುಹೋಗುಗಳಿಗೆ ವಿದ್ಯಾರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ.

19. ವಿಶ್ವವಿದ್ಯಾಲಯದ ಸುತ್ತೋಲೆಗಳಿಗೆ ಆದ್ಯತೆ ನೀಡಿ ತ್ವರಿತವಾಗಿ ಸ್ಪಂದಿಸುವುದು.

20. ಪರೀಕ್ಷೆಗೆ ಸಂಬಂಧಪಟ್ಟ ಸುತ್ತೋಲೆಗಳಿಗೆ ಆದ್ಯತೆ ನೀಡಿ ತ್ವರಿತವಾಗಿ ಸ್ಪಂದಿಸುವುದು.

21. 2025-26 ನೇ ಸಾಲಿನ ಪ್ರವೇಶ ನಿಯಮಾವಳಿ ಅನುಗುಣವಾಗಿ ಪ್ರವೇಶ ಪಡೆಯುವುದು.

22. ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮತ್ತು ಇತರೆ ಮಾಹಿತಿಗಳನ್ನು www.rcub.ac.in **Website** ನಲ್ಲಿ ನೋಡತಕ್ಕದ್ದು ಹಾಗೂ ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಕಚೇರಿ ದೂರವಾಣಿ ಸಂಖ್ಯೆ: **0831-2565257/234** ಅನ್ನು ಸಂಪರ್ಕಿಸುವುದು.
23. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ UUCMS ತಂತ್ರಾಂಶದಲ್ಲಿ ಏನಾದರೂ ತಾಂತ್ರಿಕ ಸಮಸ್ಯೆಗಳಿದ್ದರೆ uucms@rcub.ac.in ಗೆ mail ಕಳುಹಿಸುವುದು.
24. ಈ ಮೊದಲು ಸ್ನಾತಕ ಕೋರ್ಸುಗಳಿಗೆ ಪ್ರವೇಶಾತಿ ಪಡೆಯುವಾಗ UUCMS ತಂತ್ರಾಂಶದಲ್ಲಿ Create ಯಾಗಿರುವ ID ಅನ್ನು ಬಿ.ಇಡಿ ಪ್ರವೇಶ ಪಡೆಯುವಲ್ಲಿ ಉಪಯೋಗಿಸಿ, ಅರ್ಜಿ ಸಲ್ಲಿಸುವುದು. **(ಉದಾ: 2200231726)**
25. UUCMS ತಂತ್ರಾಂಶದಲ್ಲಿ ಏನಾದರೂ ತಾಂತ್ರಿಕ ಸಮಸ್ಯೆಗಳಿದ್ದರೆ ಸಹಾಯವಾಣಿ ನಂ: 08024411500 ವನ್ನು ಸಂಪರ್ಕಿಸುವುದು ಅಥವಾ ಮಹಾವಿದ್ಯಾಲಯದ **Admin Login** ದಿಂದ **Ticket Raise** ಮಾಡುವುದು.

Sd/- 11/10/25

**ಉಪಕುಲಸಚಿವರು**

ಉಪಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ

**ಇವರಿಗೆ**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಇರುವ ಎಲ್ಲ ಸಂಯೋಜಿತ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ.

**ಪ್ರತಿ ಮಾಹಿತಿಗಾಗಿ:**

1. ಕುಲಸಚಿವರು (ಮೌಲ್ಯಮಾಪನ) ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ಡೀನರು, ಶಿಕ್ಷಣ ನಿಖಾಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.
3. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
4. ನೋಡಲ್ ಅಧಿಕಾರಿಗಳು, UUCMS ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.